ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಮಸಾಸಂಇ : ಉ ನಿ : ಸುಮಪ : 2019–20 : ದಿನಾಂಕ: 2–12–2019**

**<u>ಪತ್ರಿಕಾ ಆಮಂತ್ರಣ</u>**

1. **<u>ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ವತಿಯಿಂದ ಪದ್ಮಶ್ರೀ ಕದ್ರಿ ಗೋಪಾಲನಾಥ್ ಸ್ಮರಣಾಂಜಲಿ ಕಾರ್ಯಕ್ರಮ:</u>**

   **<u>ಸ್ಮರಣಾಂಜಲಿ:</u>**

   ಗಣ್ಯರಿಂದ ಭಾವಚಿತ್ರಕ್ಕೆ ಪುಷ್ಪ ನಮನ:

   ಅಧ್ಯಕ್ಷತೆ:

   ಶ್ರೀ ಆನೂರು ಅನಂತಕೃಷ್ಣ ಶರ್ಮ,
   ಅಧ್ಯಕ್ಷರು,
   ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು.

   ದಿನಾಂಕ: 3–12–2019 ಮಂಗಳವಾರ ಸಮಯ: ಸಂಜೆ 5–00 ಗಂಟೆಗೆ

   ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.

**<u>ಪತ್ರಿಕಾ ಪ್ರಕಟಣೆ</u>**

# <u>ಅಂತರರಾಷ್ಟ್ರೀಯ ಅನ್ವೇಷಣೆ ಹಾಗೂ ಸೃಜಶೀಲತಾ ಸಮಾವೇಶಕ್ಕೆ ಚಾಲನೆ</u>

ಬೆಂಗಳೂರು, ಡಿಸೆಂಬರ್ 2 (ಕರ್ನಾಟಕ ವಾರ್ತೆ)

ಬೆಂಗಳೂರು ಭಾರತದ ಮಾಹಿತಿ ತಂತ್ರಜ್ಞಾನ ರಾಜಧಾನಿಯೆಂದೇ ಜಗತ್ತಿನಾದ್ಯಂತ ಪ್ರಚಲಿತವಾಗಿದೆ. ವಿಶ್ವದ ಎಲ್ಲ 500 ಅದೃಷ್ಟಮಯ ಕಂಪನಿಗಳನ್ನು ಹೊಂದಿರುವ ಕೆಲವೇ ಕೆಲವು ನಗರಗಳಲ್ಲಿ ಆನ್ವೇಷಣೆ ಹಾಗೂ ಸೃಜನಶೀಲತಾ ಸಮಾವೇಶಕ್ಕೆ ಆಣಿಯಾಗಿದೆ.

ಈ ಸಮಾವೇಶವು ಜಾಗತಿಕ ಶೈಕ್ಷಣಿಕ ವೇದಿಕೆಯ ಅಡಿಯಲ್ಲಿ 2 ಮತ್ತು 3ನೇ ಡಿಸೆಂಬರ್ 2019 ರಂದು ದಿ ಲಲಿತ್ ಅಶೋಕ ಹೋಟೆಲ್‌ನಲ್ಲಿ ಜಗರುಲಿದೆ. ಈ ಸಮಾವೇಶವು ವಿಶೇಷವಾಗಿದ್ದು ಯಾವುದೋ ಲಾಭದಾಯಕ ಉದ್ದೇಶ ಹೊಂದಿರದೇ ಪ್ರಪಂಚದ ವಿವಿಧ ಜ್ಞಾನ ಹಂಚಿಕೆದಾರರನ್ನು ಹೊಂದಿದೆ.

ಅಂತರರಾಷ್ಟ್ರೀಯ ಅನ್ವೇಷಣೆ ಹಾಗೂ ಸೃಜನಶೀಲತೆ ಸಮಾವೇಶ (ಖ2 ಅ2) 4 ದಿನಗಳ ಕಾರ್ಯಕ್ರಮವಾಗಿದ್ದು, ನವೆಂಬರ್ 30 ರಿಂದ ಪ್ರಾರಂಭವಾಗಿ ಡಿಸೆಂಬರ್ 03 ರವರೆಗೆ ನಡೆಯುವುದು. ಈ ಸಮಾವೇಶದಲ್ಲಿ ಹಲವಾರು ಅಧಿವೇಶನಗಳು ಹಾಗೂ ತಜ್ಞ ಚರ್ಚಾ ಸಭೆಗಳು, ವಿವಿಧ ವಷಯಗಳ ಮೇಲೆ ಜರುಗಲಿದ್ದು,. ಭಾರತವನ್ನು ಒಳಗೊಂಡ ಸುಮಾರು 30 ರಾಷ್ಟ್ರಗಳಿಂದ ವಿವಿಧ ವಿಷಯತಜ್ಞರು, ತಂತ್ರಜ್ಞಾನ ಪಂಡಿತರು, ವಿವಿಧ ವ್ಯವಹಾರಿಕ ಕಂಪನಿಗಳ ಮುಖ್ಯಸ್ಥರು, ಶಿಕ್ಷಣ ತಜ್ಞರು, ಅನ್ವೇಷಕರು ಹಾಗೂ ಯುವ ನಾಯಕರು ವಿವಿಧ ಚರ್ಚಾಗೋಷ್ಠಿಗಳಲ್ಲಿ ಭಾಗವಹಿಸುವರು. ರಾಷ್ಟ್ರಮಟ್ಟದಲ್ಲಿ ಹಾಗೂ ಸಮಾಜದಲ್ಲಿ ಜ್ಞಾನದ ವೃದ್ಧಿಗೆ ಹಾಗೂ ಹಂಚಿಕೆಗೆ ವಿಶೇಷ ಕೊಡುಗೆ ನೀಡಿದ ವ್ಯಕ್ತಿಗತ ಜ್ಞಾನ ಹಂಚುವುದು ಹಾಗೂ ವಿವಿಧ ಸಂಘ-ಸಂಸ್ಥೆಗಳನ್ನು ಸಮಗ್ರೀಕರಿಸುವ ಉದ್ದೇಶದೊಂದಿಗೆ (ಖ2 ಅ2) ಸಮಾವೇಶವನ್ನು ಸಂಘಟಿಸಲಾಗಿದೆ.

ಬೆಂಗಳೂರಿನಲ್ಲಿ ನಡೆಯುತ್ತಿರುವ ಈ ಸಮಾವೇಶದ ಪ್ರಾರಂಭದಲ್ಲಿ ಎರಡು ದಿನಗಳ ಕಾಲ ಅಂತರರಾಷ್ಟ್ರೀಯ ಶಿಬಿರಾರ್ಥಿಗಳಿಗೆ ಸಂಸ್ಕೃತಿ ಯಾತ್ರೆಯನ್ನು ಆಯೋಜಿಸಲಾಗಿದ್ದು ಈ ಎರಡು ದಿನಗಳಲ್ಲಿ ಐತಿಹಾಸಿಕ ಪರಂಪರೆಯ ನಗರವಾಗಿರುವ ಮೈಸೂರು, ಜೀವನ ಕಲೆಯ ಅಂತರರಾಷ್ಟ್ರೀಯ ಕೇಂದ್ರ ಹಾಗೂ ಸಾಕ್ಷಿ ಕೇಂದ್ರ ಇತ್ಯಾದಿ ಸ್ಥಳಗಳಿಗೆ ಭೇಟಿ ನೀಡಲಿದ್ದು ಈ ಎರಡು ದಿನಗಳ ಸಾಂಸ್ಕೃತಿಕ ಯಾತ್ರೆಯನ್ನು ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಬೆಂಬಲಿಸುತ್ತಿದೆ.

ಇಂದು ನಡೆದ ಉದ್ಘಾಟನೆ ಹಾಗೂ ಸಮಾರೋಪ ಸಮಾರಂಭಗಳಲ್ಲಿ ಹಲವಾರು ಪ್ರಮುಖ ಮಹನೀಯರು ಭಾಗಹಿಸಿದ್ದು, ಅವರಲ್ಲಿ ಪ್ರಮುಖರೆಂದರೆ ಡಾ. ಆದಿಮುಲಪು ಸುರೇಶ, ಆಂಧ್ರಪ್ರದೇಶ ಸರ್ಕಾರದ ಉನ್ನತ ಶಿಕ್ಷಣ ಸಚಿವರು, ಶ್ರೀ ಬಿ.ಆರ್. ಶೆಟ್ಟಿ, ಖ್ಯಾತ ಉದ್ದಿಮೆದಾರರು ಅಬುಧಬಿ ಸೇರಿದಂತೆ ಸಂಯುಕ್ತ ಅರಬ್ ಸಂಸ್ಥೆಗಳು ಭಾಗವಹಿಸಿವೆ.

ವಿಶ್ವ ಪ್ರಶಂಸೆಯ ಆಧ್ಯಾತ್ಮಿಕ ಗುರುಗಳಾದ, ಬೆಂಗಳೂರಿನ ಜೀವನ ಕಲೆ ಅಂತರರಾಷ್ಟ್ರೀಯ ಕೇಂದ್ರದ ಶ್ರೀ ರವಿಶಂಕರ ಗುರೂಜಿಯವರು 3ನೇ ಡಿಸೆಂಬರ್‌ದಂದು ವಿಶೇಷ ಪ್ರವಚನ ನೀಡಲಿದ್ದಾರೆ. ಶ್ರೀಯುತ ಬಿ.ಆರ್. ಶೆಟ್ಟಿಯವರಿಗೆ ಅವರ ಜೀವಮಾನ ಸಾಧನೆಗಾಗಿ ಶತಮಾನದ ಜೀವಮಾನ ಸಾಧನಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು. ವಿವಿಧ ದಾನಿ ಸಂಸ್ಥೆಗಳ ಪ್ರತಿನಿಧಿಗಳನ್ನು ಹಾಗೂ ಇತರ ಸಾಧಕರನ್ನು ಈ ಸಮಾವೇಶದಲ್ಲಿ ಗೌರವಿಸಲಾಗುವುದು.

ಜಾಗತಿಕ ಶೈಕ್ಷಣಿಕ ವೇದಿಕೆಯ ಸಂಘಟಕರು ಈ ಅಂತರರಾಷ್ಟ್ರೀಯ ಅನ್ವೇಷಣೆ ಹಾಗೂ ಸೃಜನಶೀಲತಾ ಸಮಾವೇಶದ ಪರಿಕಲ್ಪನೆ ಮಾಡಿರುವುದಕ್ಕೆ ಹಾಗೂ ಸಮಾವೇಶದ ಮುಖಾಂತರ ಜ್ಞಾನಪರಿಸರದ ಅಭಿವೃದ್ಧಿಗೆ

ಅವರು ಹೊಂದಿದ ದೂರದೃಷ್ಟಿಗಾಗಿ ಮತ್ತು ಈ ಸಮಾವೇಶವನ್ನು ಬೆಂಗಳೂರಿನಂತಹ ಜಾಗತಿಕ ಮಹಾನಗರದಲ್ಲಿ ಆಯೋಜಿಸಿದ್ದಕ್ಕೆ ಅಭಿನಂದಾರ್ಹರು.

ಅಂತರರಾಷ್ಟ್ರೀಯ ಅನ್ವೇಷಣೆ ಹಾಗೂ ಸೃಜನಶೀಲತಾ ಸಮಾವೇಶವು, ಜಾಗತಿಕ ಶೈಕ್ಷಣಿಕ ವೇದಕೆಯ ಅಡಿಯಲ್ಲಿ ನಿಯೋಜಿಸಲಾಗಿದೆ. ಜಾಗತಿಕ ಶೈಕ್ಷಣಿಕ ವೇದಿಕೆಯು ಆಂದ್ರ ಪ್ರದೇಶದ ಅನಂತಪುರಂದಲ್ಲಿ ಸ್ಥಾಪಿತವಾದ ಭಾರತೀಯ ಅಭಿಯಾಂತ್ರಿಕ, ವಿಜ್ಞಾನ ಹಾಗೂ ತಂತ್ರಜ್ಞಾನ ಅನ್ವೇಷಣಾ ವಿಶ್ವವಿದ್ಯಾಲಯದ ಒಂದು ವಿಶೇಷ ಹಾಗೂ ಲಾಭರಹಿತ ಪರಿಕಲ್ಪನೆಯಾಗಿದೆ.

ಜಾಗತಿಕ ಶೈಕ್ಷಣಿಕ ವೇದಿಕೆಯನ್ನು ಶ್ರೇಷ್ಠ ಶಿಕ್ಷಣ ತಜ್ಞರಾದ ಡಾ. ರೂಪಾ ವಾಸುದೇವನ್ ಹಾಗೂ ಶ್ರೀ ಭರತಲಾಲ್ ಮೀನಾ (ನಿವೃತ್ತ ಐ.ಎ.ಎಸ್. ಅಧಿಕಾರಿಗಳು) ಹಾಗೂ ವಿವಿಧ ಅಂತರರಾಷ್ಟ್ರೀಯ ಪಾಲುದಾರರು ಜೊತೆಗೂಡಿ ಸ್ಥಾಪಿಸಿದ್ದಾರೆ. ಈ ವೇದಿಕೆಯ ಪ್ರಮುಖ ಉದ್ದೇಶವೆಂದರೆ ವಿಶ್ವದ ವಿವಿದೆಡೆ ಅಭಿವೃದ್ಧಿಪರ ಕಾರ್ಯನಿರ್ವಹಿಸುವ ವಿವಿಧ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪಾಲುದಾರರು ವ್ಯಕ್ತಿಗತ ಜ್ಞಾನ ಹಂಚಿಕೆದಾರರ, ಜ್ಞಾನ ಹಾಗೂ ಅನುಭವಗಳನ್ನು ಕ್ರೋಢೀಕರಿಸಿ ಪರಸ್ಪರ ಹಂಚಿಕೆ ಮಾಡುವ ಮೂಲಕ ಒಟ್ಟಾರೆ ಅಭಿವೃದ್ಧಿ ಪ್ರಕ್ರಿಯೆಯನ್ನು ಬೆಂಬಲಿಸುವುದಾಗಿದೆ.

ಈ ಸಮಾವೇಶಕ್ಕೆ ಮುನ್ನುಡಿಯಾಗಿ ಜಾಗತಿಕ ಶೈಕ್ಷಣಿಕ ವೇದಿಕೆಯು ಒಂದು ವಿಶೇಷ ಸಂಸ್ಕೃತಿಯ ಯಾತ್ರೆಯನ್ನು (ಪರಂಪರೆ ಹಾಗೂ ಸಾಂಸ್ಕೃತಿಕ ಪ್ರವಾಸ) ನವೆಂಬರ್ 30 ರಿಂದ ಡಿಸೆಂಬರ್ 1 ರ ವರೆಗೆ ಹಮ್ಮಿಕೊಳ್ಳಲಾಗಿತ್ತು. ಈ ಯಾತ್ರೆಯನ್ನು ಪ್ರಮುಖವಾಗಿ ಅಂತರರಾಷ್ಟ್ರೀಯ ಶಿಬಿರಾರ್ಥಿಗಳಿಗಾಗಿ ಆಯೋಜಿಸಲಾಗಿದೆ. ರಾಷ್ಟ್ರದ ಶ್ರೀಮಂತ ಪರಂಪರೆ ಹಾಗೂ ಐತಿಹಾಸಿಕ ಸಂಸ್ಕೃತಿಯನ್ನು ಕಾಯ್ದುಕೊಳ್ಳುವುದು ಹಾಗೂ ಕಾಪಾಡುವುದು ಅತ್ಯಂತ ಪ್ರಮುಖ ಅಂಶವಾಗಿದೆ. ಈ ಸಮಾವೇಶದಲ್ಲಿ ಕರ್ನಾಟಕ ವಿಶೇಷ ಪರಂಪರೆಯನ್ನು ಬಿಂಬಿಸುವ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ಕಾರ್ಯಾಗಾರಗಳನ್ನು ಹಾಗೂ ಪ್ರವಾಸೋದ್ಯಮ ಪ್ರಾಮುಖ್ಯತೆಯ ಅಧಿವೇಶನಗಳನ್ನು ಆಯೋಜಿಸಲಾಗುವುದು. ಈ ಮೂಲಕ ಜಾಗತಿಕ ಶೈಕ್ಷಣಿಕ ವೇದಿಕೆಯು ಕರ್ನಾಟಕವನ್ನು ಒಂದು ಅಂತರರಾಷ್ಟ್ರೀಯ ಸಾಂಸ್ಕೃತಿಕ ತಾಣವನ್ನಾಗಿ ಪ್ರಸ್ತುತಪಡಿಸಲು ಯೋಜಿಸಿದೆ. ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಈ ಸಂಸ್ಕೃತಿ ಯಾತ್ರೆಯ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮದ ಬೆಂಬಲ ಪಾಲುದಾರರಾಗಿ ಸಹಯೋಗ ನೀಡಿದೆ.

ಜಾಗತಿಕ ಶೈಕ್ಷಣಿಕ ವೇದಿಕೆಯ ಈ ಅಂತರರಾಷ್ಟ್ರೀಯ ಅನ್ವೇಷಣೆ ಹಾಗೂ ಸೃಜನಶೀಲತಾ ಸಮಾವೇಶವು 5 ಪ್ರಮುಖ ಆದ್ಯತಾ ವಿಷಯಗಳನ್ನು ಹೊಂದಿದ್ದು, ಈ ವಿಷಯಗಳ ಅಡಿಯಲ್ಲಿ ಜರುಗುವ ವಿವಿಧ ಅಧಿವೇಶನಗಳಲ್ಲಿ ಸೃಜನಾತ್ಮಕ ಚರ್ಚೆಗಳು ಹಾಗೂ ಅನುಭವನ ಹಂಚಿಕೆ ನಡೆಯುವುದು.

1. ಅನ್ವೇಷಣೆ ಹಾಗೂ ಸೃಜನಶೀಲತೆ.
2. ಸಂಸ್ಕೃತಿ, ಪರಂಪರೆ ಹಾಗೂ ಅಂತರ ಸಾಂಸ್ಕೃತಿಕ ಸಂಪರ್ಕಗಳು.
3. ಆಡಳಿತ–ಸಚಿವಾಲಯಗಳು ಹಾಗೂ ರಾಜಕೀಯ
4. ಶೈಕ್ಷಣಿಕ ಸುಧಾರಣೆಗಳು
5. ಉದ್ಯಮ ಚತುರತೆ – ಸ್ಟಾರ್ಟಅಪ್‌ಗಳು ಹಾಗೂ ಮಾರುಕಟ್ಟೆಗಳು

ಮೇಲಿನ ವಿಷಯಗಳಲ್ಲದೇ ಹಲವಾರು ಪ್ರಮುಖ ವಿಷಯಗಳು ಹಾಗೂ ಉಪ ವಿಷಯಗಳ ಮೇಲೆ ಸಮಾವೇಶದಲ್ಲಿ ಚರ್ಚಿಸಲಾಗುವುದು.

ಜಾಗತಿಕ ಶೈಕ್ಷಣಿಕ ವೇದಿಕೆಯ ಪ್ರಮುಖ ನಂಬಿಕೆ ಎಂದರೆ ಶಿಕ್ಷಣವು ಕೆಲವರ ಪರಿಚಾರ, ರಚನೆಯ ಶೈಕ್ಷಣಿಕ ಮಾರ್ಗದ ಮೂಲಕ ಜ್ಞಾನದ ವರ್ಗಾವಣೆಗಿಂತಲೂ ಹೆಚ್ಚಿನದಾಗಿದೆ. ಅದು ವಿವಿಧ ಅನ್ವೇಷಕರಿಂದ, ಸಂಪನ್ಮೂಲ ವ್ಯಕ್ತಿಯಿಂದ, ಬರುವ ಜ್ಞಾನದ ಹಂಚಿಕೆಗಳಿಗೆ ಪೂರಕವಾಗಿದ್ದು ಒಂದು ವೇದಿಕೆ ಒದಗಿಸುವ ಅವಶ್ಯಕತೆಯನ್ನು ಮನಗಂಡಿದೆ. ಜಾಗತಿಕ ಶೈಕ್ಷಣಿಕ ವೇಕೆಯು ಜ್ಞಾನದ ವಿವಿಧ ಹಂತಗಳನ್ನು ಹಾಗೂ ಮೂಲಗಳನ್ನು ಅದರಲ್ಲಿಯೂ ಪ್ರಮುಖವಾಗಿ ಸೈದ್ಧಾಂತಿಕ ಪ್ರಾಯೋಗಿಕ, ವೈಜ್ಞಾನಿಕ–ತಾಂತ್ರಿಕ, ಸಾಮಾಜಿಕ–ಮಾನವತವಾದಿ ಹಾಗೂ ಸಾಂಸ್ಕೃತಿಕ ತರಬೇತಿಯಂತಹ ಹಲವಾರು ಸಮುದಾಯ ಹಾಗೂ ಸಮಾಜದ ಮೇಲೆ ತನ್ನ ಪ್ರಭಾವ ಬೀರುವ ಅಂಶಗಳನ್ನು ಗುರುತಿಸುವುದಾಗಿದೆ. ಜಾಗತಿಕ ಶೈಕ್ಷಣಿಕ ವೇದಿಕೆಯು ಸಮಾಜದ ಮೇಲೆ ಪ್ರಭಾವ ಬೀರುವ ಹಾಗೂ ಸಮಾಜಕ್ಕೆ ಲಾಭದಾಯಕ ಪ್ರಯೋಜನಗಳನ್ನು ತರುವ ಹಾಗೂ ಕಲಿಕೆದಾರರಲ್ಲಿ ಧನಾತ್ಮಕ ಬದಲಾವಣೆಗಳನ್ನು ತರುವ ಹಾಗೂ ಸ್ಫೂರ್ತಿ ನೀಡುವ ಜ್ಞಾನವನ್ನು ಪ್ರಚುರಪಡಿಸುವ, ಸ್ವತಂತ್ರ, ವೈಜ್ಞಾನಿಕ ಹಾಗೂ ಅರ್ಥಿಕ ಕಾರ್ಯಚಟುವಟಿಕೆಗಳನ್ನು ಪ್ರತಿಬಿಂಬಿಸುವುದು.

ಅಂತರರಾಷ್ಟ್ರೀಯ ಅನ್ವೇಷಣೆ ಹಾಗೂ ಸೃಜನಶೀಲತಾ ಸಮಾವೇಶವು ಸೀಮಿತ ಪ್ರಾಯೋಗಿಕ ಉಪಯುಕ್ತತೆಯನ್ನು ಹೊಂದಿರುವ ಮೂಲ ಜ್ಞಾನದ ಕ್ರೋಢೀಕರಣಕ್ಕೆ ಸೀಮಿತವಾಗಿರುವ ಜ್ಞಾನ ಪರಿಸರವನ್ನು ಉತ್ತೇಜಿಸುವುದಾಗಿದೆ. ಆ ಮೂಲಕ ಜ್ಞಾನವು ಹೊಸ ಅನ್ವೇಷಣೆಗಳನ್ನು ಹಾಗೂ ಸಾಮಾಜಿಕ ಮೌಲ್ಯ ಹೊಂದಿದ ಅಂಶಗಳಾಗಿ ಪರಿವರ್ತನೆಹೊಂದುವತ್ತ ಗುರಿ ಹೊಂದಲಾಗಿದೆ. ಆ ಮೂಲಕ ಸಮಾಜದ ಮೇಲೆ ಪ್ರಭಾವ ಬೀರುವ ಹಾಗೂ ಪ್ರಪಂಚದಾದ್ಯಂತ ಕ್ರಾಂತಿ ಮೊಳಗಿಸುವತ್ತ ಜ್ಞಾನದ ವರ್ಗಾವಣೆಗೆ ಗುರಿ ಇರಿಸಲಾಗಿದೆ.

ಈ ಸಮಾವೇಶವು ಜಾಗತಿಕ ಶೈಕ್ಷಣಿಕ ವೇದಿಕೆಯು ಪ್ರಥಮ ಸಮಾವೇಷವಾಗಿದೆ. ಮುಂದಿನ ಸಮಾವೇಶಗಳನ್ನು ಭಾರತದ ವಿವಿಧ ಸ್ಥಳಗಳಲ್ಲಿ ಇಲ್ಲವೇ ಹೊರದೇಶಗಳಲ್ಲಿ ಹಮ್ಮಿಕೊಳ್ಳಲಾಗುವುದು. ವೇದಿಕೆಯು ಪ್ರತಿ ರಾಷ್ಟ್ರದಲ್ಲಿ ತನ್ನ ರಾಷ್ಟ್ರೀಯ ಕೋಶವನ್ನು ಹೊಂದಲು ಆಲೋಚಿಸಿದ್ದು, ಭಾರತದಾದ್ಯಂತ "ನಾಲೇಜ್ ಹಬ್ಸ್" ಗಳನ್ನು ಸ್ಥಾಪಿಸುವ ಗುರಿ ಹೊಂದಿದೆ. ಇತ್ತೀಚೆಗೆ ಅರ್ಮೇನಿಯಾದಲ್ಲಿ ಜಾಗತಿಕ ಶೈಕ್ಷಣಿಕ ವೇದಿಕೆಯ ಕೋಶವನ್ನು ಪ್ರಾರಂಭಿಸಲಾಗಿದೆ.

ಈ ಸಮಾವೇಶದಿಂದ ಕೊಂಡೊಯ್ಯಬಹುದಾದ ಅಂಶಗಳು ಹಾಗೂ ಫಲಿತಾಂಶಗಳು:

- ಶಿಕ್ಷಣ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸ್ಟಾರ್ಟಅಪ್‌ಗಳನ್ನು ಯಾವ ರೀತಿಯಾಗಿ ಬಲಶಾಲಿಗೊಳಿಸಬಹುದೆಂಬುದರ ಬಗ್ಗೆ ಒತ್ತು ನೀಡುವುದು. ಹೊಸ ಸ್ಟಾರ್ಟಅಪ್‌ಗಳು ತಮ್ಮ ಅನ್ವೇಷಣೆಗಳನ್ನು ಪ್ರಚುರಪಡಿಸಲು ಸೂಕ್ತ ವೇದಿಕೆ ಒದಗಿಸುವುದು.
- ಸಮಾವೇಶವು ವಿವಿಧ ಸಂಘ ಸಂಸ್ಥೆಗಳೊಂದಿಗೆ ಸಂಬಂಧ ಕಲ್ಪಿಸುವುದು, ಪಾಲುದಾರಿಕೆಯನ್ನು ಉತ್ತೇಜಿಸುವುದು ಹಾಗೂ ಒಡಂಬಡಿಕೆಗಳನ್ನು ಮಾಡುವ ಅವಕಾಶಗಳನ್ನು ಕಲ್ಪಿಸುವುದು.
- ಅಂತರರಾಷ್ಟ್ರೀಯ ಅನ್ವೇಷಣೆ ಹಾಗೂ ಸೃಜನಶೀಲತಾ ಸಮಾವೇಶವು ಶಿಕ್ಷಣ ತಜ್ಞರ, ಕೈಗಾರಿಕೆ ನಾಯಕರ, ಸಂಶೋಧನಾ ಸಂಸ್ಥೆಗಳ ಮುಖ್ಯಸ್ಥರ ಹಾಗೂ ಅನ್ವೇಷಕರ ಬಹುದೊಡ್ಡ ಸಮಾಗಮವಾಗಿದೆ. ಸಮಾವೇಶದ ಸ್ಥಳದಲ್ಲಿ ಎರಡು ಕೊಠಡಿಗಳನ್ನು ಒಡಂಬಡಿಕೆ ಮಾಡಿಕೊಳ್ಳುವ ಉದ್ದೇಶಕ್ಕಾಗಿ 3 ನೇ ಡಿಸೆಂಬರ್ ಕಾಯ್ದಿರಿಸಲಾಗಿದೆ. ಈ ಸಮಾವೇಶದಲ್ಲಿ ಹಲವಾರು ಒಡಂಬಡಿಕೆಗಳನ್ನು ಪಾಲುದಾರರು

ಸಹಿ ಮಾಡುವ ಉದ್ದೇಶ ಹೊಂದಲಾಗಿದೆ. ಸಮಾವೇಶದ ಶಿಬಿರಾರ್ಥಿಗಳು ಈ ಸಮಾವೇಶದಿಂದ ಅನುಭವ ಹಂಚಿಕೆ ಹಾಗೂ ಸಂಬಂಧ ಕಲ್ಪಿಸುವ ಹಲವು ಅವಕಾಶಗಳನ್ನು ಹೊಂದಿರುತ್ತಾರೆ.

- ಈ ಸಮಾವೇಶದಲ್ಲಿ ಭಾಗವಹಿಸುವ ಉತ್ಸಾಹಿ ಉದ್ದಿಮೆದಾರರಿಗೆ ಅವರ ಸ್ಟಾರ್ಟಅಪ್‌ಗಳನ್ನು ವಿವಿಧ ಹಣಕಾಸು ಹೂಡಿಕೆದಾರರೊಂದಿಗೆ ಸಂಪರ್ಕ ಕಲ್ಪಿಸಲು ವೇದಿಕೆ ನೀಡಲಾಗುವುದು. ಆ ಮೂಲಕ ಕೆಲವು ಸ್ಟಾರ್ಟಅಪ್‌ಗಳಿಗೆ ಜಾಗತಿಕ ಶೈಕ್ಷಣಿಕ ವೇದಿಕೆಯು ಈ ಸಮಾವೇಶದಲ್ಲಿ ಸಹಾಯ ಕಲ್ಪಿಸುವ ಉದ್ದೇಶ ಹೊಂದಲಾಗಿದೆ.
- ಈ ಸಮಾವೇಶದಲ್ಲಿ ಭಾರತದಲ್ಲಿರುವ ವಿವಿಧ ರಾಷ್ಟ್ರಗಳ ರಾಯಭಾರಿಗಳು, ಅಂತರರಾಷ್ಟ್ರೀಯ ಸಮುದಾಯದೊಂದಿಗೆ ಸಂಬಂಧ ಕಲ್ಪಿಸುವುದು ಹಾಗೂ ಜ್ಞಾನ ವಿನಿಮಯ ಮಾಡುವುದು ಇಲ್ಲಿ ಪ್ರಮುಖವಾಗಿದೆ.
- ಏಷಿಯಾ, ಯುರೋಪ ಹಾಗೂ ಆಫ್ರಿಕಾ ಖಂಡಗಳ ವಿವಿಧ ರಾಷ್ಟ್ರಗಳಾದ ಚೀನಾ, ಇಂಡೋನೇಷಿಯಾ, ವಿಯೆಟ್ನಾಂ, ಫಿಲಿಫೈನ್ಸ್, ತುನಿಷಿಯ, ಅರ್ಮೇನಿಯಾ, ಭೋಸ್ನಿಯಾ, ಹರ್ಜೆಗೇವಿನಾ, ಪ್ಯಾಲಿಸ್ಟೈನ್, ಇಸ್ರೈಲ್ ಹಾಗೂ ಭಾರತದ ಶಿಬಿರಾರ್ಥಿಗಳು ಪಾಲ್ಗೊಳ್ಳುವರು. ಈ ಸಮಾವೇಶವು ಕರ್ನಾಟಕಕ್ಕೆ ಹಾಗೂ ಭಾರತಕ್ಕೆ ಹೊಸ ಅವಕಾಶಗಳನ್ನು ನೀಡುವುದಲ್ಲದೇ ಎಲ್ಲಾ ಶಿಬಿರಾರ್ಥಿಗಳಿಗೆ ಇದೊಂದು ಕಲಿಕಾ ಸಮಾವೇಶವಾಗಿದೆ.

<u>ಸಂಸ್ಕೃತಿ ಹಾಗೂ ಪರಂಪರೆಗೆ ಪ್ರಾಮುಖ್ಯತೆ:</u>

- ವೇದಿಕೆಯು ಸಂಘಟಕರು ಸಂಸ್ಕೃತಿ ಯಾತ್ರೆಯಂತಹ ಪ್ರವಾಸ ಕಾರ್ಯಕ್ರಮಗಳು ಅವಶ್ಯಕವಾಗಿವೆ ಎಂದು ನಂಬಿದ್ದಾರೆ. ಶಿಬಿರದಲ್ಲಿ ಭಾಗವಹಿಸುವ ಅತಿಥಿಗಳಿಗೆ, ಶಿಬಿರಾರ್ಥಿಗಳಿಗೆ ಹಾಗೂ ಸಂಪನ್ಮೂಲ ವ್ಯಕ್ತಿಗಳಿಗಾಗಿ 2 ನೇ ಡಿಸೆಂಬರ್ ಸಾಯಂಕಾಲ ಸಾಂಸ್ಕೃತಿಕ ಸಂಜೆಯನ್ನು ಹೋಟೇಲ್ ಅಶೋಕದಲ್ಲಿ ಏರ್ಪಡಿಸಲಾಗಿತ್ತು.
- ಈ ಸಮಾವೇಶದಲ್ಲಿ ಚರ್ಚಿಸಲಾಗುವ ಪ್ರಮುಖ ವಿಷಯಗಳಲ್ಲಿ ಸಂಸ್ಕೃತಿ ಹಾಗೂ ಪರಂಪರೆಯ ಜಾಗತಿಕ ಒಡಂಬಡಿಕೆ ಒಂದಾಗಿದ್ದು, ಸಾಂಸ್ಕೃತಿಕ ಪರಂಪರೆಯಲ್ಲಿ ಸಾಂಪ್ರದಾಯಗಳು, ಪದ್ದತಿಗಳು, ಸ್ಥಳಗಳು, ಉದ್ದೇಶಗಳು ಹಾಗೂ ಮೌಲ್ಯಗಳು ಒಡಗೂಂಡಿವೆ. ಭಾರತದ ವೈವಿದ್ಯಮಯ ಸಂಸ್ಕೃತಿಯ ಪ್ರಮುಖ ಅಂಶಗಳಾದ ಧರ್ಮ, ತತ್ವಜ್ಞಾನ, ಆಹಾರ ಪದ್ಧತಿ, ಭಾಷೆ, ನಾಟ್ಯ, ಸಂಗೀತ ಹಾಗೂ ಚಲನಚಿತ್ರಗಳು ರಾಷ್ಟ್ರದಾದ್ಯಂತ ಹಾಗೂ ಪ್ರಪಂಚದಲ್ಲಿ ತನ್ನದೇ ಆದ ಪ್ರಭಾವ ಹೊಂದಿದೆ. ಈ ಸಮಾವೇಶದಲ್ಲಿ ಯೋಗ, ವೇದ, ಸಂಗೀತ ಹಾಗೂ ಕಲೆ ಇತ್ಯಾದಿಗಳ ತಜ್ಞರು ಭಾಗವಹಿಸುತ್ತಿದ್ದು, ಅವರು ತಮ್ಮ ಅನುಭವ ಹಾಗೂ ದೂರದೃಷ್ಟಿಯನ್ನು ಹಂಚಿಕೊಳ್ಳುವರು.

- ಭಾರತವು ಅತ್ಯಂತ ವೈವಿದ್ಯಮಯ, ಸಂಸ್ಕೃತಿ ಹಾಗೂ ಶ್ರೀಮಂತ ಪರಂಪರೆ ಹೊಂದಿದ ರಾಷ್ಟ್ರವಾಗಿದೆ. ಈ ರಾಷ್ಟ್ರದ ವೈವಿದ್ಯತೆಯಲ್ಲಿ ಐಕ್ಯತೆಯನ್ನು ಇಲ್ಲಿ ಅನುಭವಿಸಬಹುದಾಗಿದೆ. ಈ ದೇಶದ ಸಂಸ್ಕೃತಿಯನ್ನು ಕೇವಲ ಪುಸ್ತಕಗಳಿಂದ ತಿಳಿಯಲಾಗದು. ಕರ್ನಾಟಕವು ಪ್ರವಾಸಿಗರ ಅಚ್ಚುಮೆಚ್ಚಿನ ತಾಣವಾಗಿದ್ದು, ರಾಜ್ಯದಲ್ಲಿ ಪ್ರವಾಸಿಗರು ಬಯಸುವ ಎಲ್ಲ ಅಂಶಗಳು ಲಭ್ಯವಾಗಿವೆ.
- ಕರ್ನಾಟಕ ರಾಜ್ಯವು ಅತ್ಯಂತ ಕ್ರಿಯಾಶೀಲ ರಾಜ್ಯವಾಗಿದ್ದು, ರೇಷ್ಮೆ, ಶ್ರೀಗಂಧ ಹಾಗೂ ಸಾಂಬಾರ ಪದಾರ್ಥಗಳ ತವರಾಗಿದೆ. ರಾಜ್ಯದ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಹಾಗೂ ಮನಮೋಹಕ ನೈಸರ್ಗಿಕ ಸಂಪನ್ಮೂಲಗಳು ನಾಡಿಗೆ ಸೌಂದರ್ಯದ ಮೂಲಗಳಾಗಿವೆ. ಕರ್ನಾಟಕದಲ್ಲಿ ಪ್ರವಾಸೋದ್ಯಮ

ಅತ್ಯಂತ ಅಭೂತಪೂರ್ವ ಅನುಭವಕ್ಕೆ ಸಾಕ್ಷಿಯಾಗಿದೆ. ಕರ್ನಾಟಕದ ದಕ್ಷಿಣ ಪ್ರದೇಶದಲ್ಲಿ ಹಲವಾರು ವೈವಿಧ್ಯಮಯ ಅರಣ್ಯ ಪ್ರದೇಶ, ಭರಗುಟ್ಟುವ ಜಲಪಾತಗಳು, ಮನಮೋಹಕ ಸಮುದ್ರ ದಂಡೆಗಳು, ಅಭೂತಪೂರ್ವ ಪ್ರಾಣಿ ಪ್ರಪಂಚ, ಪರಂಪರೆಗಳನ್ನು ಅವುಗಳಿಗೆ ಪ್ರತೀಕಗಳಾದ ಸ್ಥಳಗಳಲ್ಲಿ ರಾಜ್ಯದ ಶಿಲ್ಪಕಲೆಯನ್ನು ನೋಡಬಹುದಾಗಿದೆ.

- ರಾಜ್ಯದ ಹೊರಗಿನಿಂದ ಬರುವ ಪ್ರವಾಸಿಗರಿಗೆ ವೈವಿಧ್ಯಮಯ ಆಕರ್ಷಕಗಳನ್ನು ತೋರ್ಪಡಿಸುವ ತಾಣವಾಗಿದೆ. ಕರ್ನಾಟಕ ರಾಜ್ಯದ ವಿವಿಧ ಪ್ರವಾಸಿ ತಾಣಗಳಲ್ಲಿ ಬೆಂಗಳೂರು ಕೂಡ ಒಂದಾಗಿದೆ. ಮಾಹಿತಿ ತಂತ್ರಜ್ಞಾನದ ತವರಾಗಿರುವ ಬೆಂಗಳೂರು ಭಾರತದ 'ಸಿಲಿಕಾನ್ ವ್ಯಾಲಿ' ಎಂದೇ ಪ್ರಸಿದ್ಧಿ ಪಡೆದಿದೆ. ಇಲ್ಲಿಯ ವೈವಿಧ್ಯಮಯ ಗಾರ್ಡನ್‌ಗಳು, ಶಾಪಿಂಗ್ ಮಾಲ್‌ಗಳು, ಪಬ್‌ಗಳು, ಸಂಗ್ರಹಾಲಯಗಳು, ಇಲ್ಲಿಯ ಮೂಲ ಆಕರ್ಷಣೆಗಳಾಗಿವೆ. ರಾಜ್ಯದಲ್ಲಿರುವ ಯುನೆಸ್ಕೋದಿಂದ ಗುರುತಿಸಲಾದ ಪಾರಂಪರಿಕ ಸ್ಥಳಗಳಾದ ಹಂಪಿ, ಬಾದಾಮಿ, ಪಟ್ಟದಕಲ್ಲು, ಪರಂಪರಾ ಪ್ರವಾಸಿ ತಾಣಗಳಾಗಿವೆ.
- ಭಾರತವು ವಿವಿಧ ಮೌಲ್ಯಗಳು, ಸಂಸ್ಕೃತಿಗಳು ಹಾಗೂ ಸಾಂಪ್ರದಾಯಗಳ ಸಂಗಮವಾಗಿದೆ. ಈ ನಾಡಿನಲ್ಲಿ ಅತಿಥಿ ದೇವೋಭವ ಎಂಬ ಭಾವನೆ ಇದ್ದು, ಪ್ರವಾಸಿಗರನ್ನು ದೇವರಂತೆ ಕಾಣುವ ಸಂಸ್ಕೃತಿ ಇದೆ.
- ಭಾರತ ವಿಶ್ವದಲ್ಲಿರುವ ವಿವಿಧ ಧರ್ಮಗಳ ಉಗಮ ಸ್ಥಾನವಾಗಿದೆ. ಇದರಲ್ಲಿ ಪ್ರಮುಖವಾದ ಧರ್ಮಗಳೆಂದರೆ ಹಿಂದೂ ಧರ್ಮ, ಸಿಖ್ ಧರ್ಮ, ಜೈನ ಧರ್ಮ, ಬೌಧ ಧರ್ಮ ಇತ್ಯಾದಿ. ಈ ದೇಶದಲ್ಲಿ ವಿವಿಧ ಧರ್ಮೀಯರು ಸಹಬಾಳ್ವೆ ಮಾಡುತ್ತಿರುವುದು ಅತ್ಯಂತ ವಿಶೇಷ.
- ಏಷಿಯಾ, ಯುರೋಪ್, ಆಫ್ರಿಕಾ ಖಂಡಗಳ ರಾಷ್ಟ್ರಗಳಾದ ಚೀನಾ, ಇಂಡೋನೇಷಿಯಾ,. ವಿಯೆಟ್ನಾಂ, ಫಿಲಿಫೈನ್ಸ್, ತುನಿಷಿಯಾ, ಅರ್ಮೇನಿಯ, ಬೋಸ್ನಿಯ, ಪೈಲಿಸ್ಟೈನ್, ಇಸ್ರೇಲ್‌ನ ವಿವಿಧ ಶಿಬಿರಾರ್ಥಿಗಳು ಈ ನಾಡಿನ ಅತಿಥ್ಯವನ್ನು ಆನಂದಿಸುವರು. ಹಲವಾರು ಶಿಬರಾರ್ಥಿಗಳಿಗೆ ಭಾರತಕ್ಕೆ ಹಾಗೂ ಕರ್ನಾಟಕಕ್ಕೆ ಇದು ಮೊದಲ ಭೇಟಿಯಾಗಿದೆ. ಈ ಭೇಟಿಯು ಅವರೆಲ್ಲರಿಗೂ ಅತ್ಯಂತ ಸ್ಮರಣೀಯವಾಗುವುದೆಂದು ನಂಬಿಕೆ. ಇದು ಇತರ ಕಾರ್ಯಕ್ರಮ ಸಂಘಟಕರಿಗೆ ಮಾರ್ಗಸೂಚಿಯಾಗುವುದೆಂದು ನಮ್ಮ ಭಾವನೆ.

<u>ಸಂಘಟಕರು:</u> ಈ ಸಮಾವೇಶದ ಸಂಘಟಕರು ಶ್ರೀ ಭರತಲಾಲ್ ಮೀನಾ, ಅಧ್ಯಕ್ಷರು, ಭಾರತಿಯ ಅಭಿಯಾಂತ್ರಿಕ, ವಿಜ್ಞಾನ ಹಾಗೂ ತಂತ್ರಜ್ಞಾನ ಅನ್ವೇಷಣಾ ವಿಶ್ವವಿದ್ಯಾಲಯ ಹಾಗೂ ಜಾಗತಿಕ ಶೈಕ್ಷಣಿಕ ವೇದಿಕೆಯ ಅಧ್ಯಕ್ಷರಾಗಿದ್ದಾರೆ. ಡಾ. ರೂಪಾ ವಾಸುದೇವನ್, ಭಾರತೀಯ ಅಭಿಯಾಂತ್ರಿಕ ವಿಜ್ಞಾನ ಹಾಗೂ ತಂತ್ರಜ್ಞಾನ ಅನ್ವೇಷಣಾ ವಿಶ್ವವಿದ್ಯಾಲಯ ಕುಲಾಧಿಪತಿಗಳು ಹಾಗೂ ಜಾಗತಿಕ ಶೈಕ್ಷಣಿಕ ವೇದಿಕೆಯ ಅಧ್ಯಕ್ಷರಾಗಿದ್ದಾರೆ. ಈ ದಿಶೆಯಲ್ಲಿ 9 ನೇ ಜೂನ್ 2019 ರಂದು "ಆಹಾರ" ಎಂಬ ಶೀರ್ಷಿಕೆಯ ಅಡಿಯಲ್ಲಿ ಬೆಂಗಳೂರಿನಲ್ಲಿ ತಾಜ್ ವೆಸ್ಟೆಂಡ್ ಹೋಟೆಲ್ ನಲ್ಲಿ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಈ ಕಾರ್ಯಾಗಾರದಲ್ಲಿ ಮೈಸೂರು ತಂಜಾವೂರು ವಿಜಯನಗರ ಹಾಗೂ ಸಂಡೂರ ರಾಜಮನೆತನದ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಕಾರ್ಯಾಗಾರದಲ್ಲಿ ಹಲವಾರು ಆಹಾರ ಇತಿಹಾಸಕಾರರು, ಆಹಾರ ಅಭಿಜ್ಞರು ಭಾಗವಹಿಸಿದ್ದರು. 1991 ರಲ್ಲಿ ಪ್ರಾರಂಭಿಸಲಾಗಿರುವ "ಅಪ್ನಾ ದೇಶ್" ಎಂಬ ಸ್ವಯಂ ಸೇವಾ ಸರ್ಕಾರೇತರ ಸಂಸ್ಥೆ ಈ ಎಲ್ಲಾ ವಿಚಾರಗಳಿಗೆ ಮೂಲ ದೂರದೃಷ್ಟಿಯನ್ನು ಒದಗಿಸಿ ಕೊಟ್ಟಿದೆ.

<u>ಪರಿಕಲ್ಪನೆ ಹಾಗೂ ಬೌಧಿಕ ಸಹಭಾಗಿತ್ವ:</u>

ಆಂದ್ರ ಪ್ರದೇಶದ ಭಾರತೀಯ ಅಭಿಯಾಂತ್ರಿಕ, ವಿಜ್ಞಾನ ಹಾಗೂ ತಂತ್ರಜ್ಞಾನ ಅನ್ವೇಷಣಾ ವಿಶ್ವವಿಯಾಲಯ ಈ ಪರಿಕಲ್ಪನೆಗೆ ಬೌದ್ಧಿಕ ಸಹಭಾಗಿತ್ವ ನೀಡಿದೆ. ವಿಶ್ವವಿದ್ಯಾಲಯ ಈ ಸಮಾವೇಶದ ಎಲ್ಲಾ ಚಿಂತನೆಗಳನ್ನು ಹಾಗೂ ಶಿಫಾರಸ್ಸುಗಳನ್ನು ದಾಖಲಾತಿ ಮಾಡಿ, ಈ ಚಿಂತನೆಗಳು ಮುಂದೆ ನಮಗೆ ಕಾರ್ಯಪ್ರವೃತ್ತರಾಗಲು ಮಾರ್ಗಸೂಚಿಯಾಗುವುದರಲ್ಲಿ ಸಂಶಯವೇ ಇಲ್ಲ.

<u>ಬೆಂಬಲ ಸಂಸ್ಥೆಗಳು:</u>

ಈ ಸಮಾವೇಶಕ್ಕೆ ಹಲವಾರು ಸಂಸ್ಥೆಗಳು ಬೆಂಬಲ ನೀಡುತ್ತಲಿವೆ. ಅವುಗಳಲ್ಲಿ ಪ್ರಮುಖವಾದ ಸಂಸ್ಥೆಗಳೆಂದರೆ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಭಾರತೀಯ ಆರ್ಥಿಕ ವ್ಯಾಪಾರ ಸಂಸ್ಥೆ, ಪ್ರೇಸ್ಟಿಜ್ ಗ್ರೂಪ್ (ಪ್ಲಾಟನ್ಂ ಪಾಲುದಾರರು) ಕವಿಕುಲಗುರು ಕಾಳಿದಾಸ ಸಂಸ್ಕೃತ ವಿಶ್ವವಿದ್ಯಾಲಯ ರಾಂಟೆಕ್, ಸಾಕ್ಷಿ, ವರ್ಲ್ಡ್ ವುಮೆನ್ ಲೀಡಿಂಗ್ ಚೇಂಜ್ ವೇದಿಕೆ.

<u>ಮಧ್ಯಮ ಪಾಲುದಾರರು</u>

- ದೂರದರ್ಶನ – ಪ್ರಸಾರ ಭಾರತಿ.
- ಸಮಾಚಾರ ಪ್ರಚಾರ ಇಲಾಖೆ ಹಾಗೂ ಸಾರ್ವಜನಿಕ ಸಂಪರ್ಕ ವಿಭಾಗ.

ಸಾಮಾಜಿಕ ಜಾಲತಾಣ ಪಾಲುದಾರರು:

- ಡ್ವಿಯೋ ಡಿಜಿಟಲ್ ಪುಣೆ

# <u>ಚುನಾವಣಾ ವೀಕ್ಷಕರಾಗಿ ನೇಮಕ</u>

ಬೆಂಗಳೂರು, ಡಿಸೆಂಬರ್ 2 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನಸಭೆಯ ಚುನಾಯಿತ ಸದಸ್ಯರಿಂದ ರಾಜ್ಯಸಭೆಗೆ ನಡೆಯಲಿರುವ ಉಪ ಚುನಾವಣೆಗೆ ಭಾರತ ಚುನಾವಣಾ ಆಯೋಗವು ಶ್ರೀ ಟೀಕಾರಾಮ್ ಮೀನಾ, ಭಾ.ಅ.ಸೇ. ಅಪರ ಮುಖ್ಯ ಕಾರ್ಯದರ್ಶಿ ಮತ್ತು ಮುಖ್ಯ ಚುನಾವಣಾಧಿಕಾರಿ, ಕೇರಳ ಅವರನ್ನು ಚುನಾವಣೆಯ ವೀಕ್ಷಕರನ್ನಾಗಿ ನೇಮಿಸಿದೆ.

ಅವರು ಡಿಸೆಂಬರ್ 2 ರಂದು ವಿಧಾನಸೌಧಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಚುನಾವಣಾಧಿಕಾರಿಯವರೊಡನೆ ಚುನಾವಣೆ ನಡೆಸಲು ಕೈಗೊಂಡಿರುವ ಸಿದ್ಧತೆಗಳ ಬಗ್ಗೆ ಚರ್ಚಿಸಿದರು ಎಂದು ಕರ್ನಾಟಕ ವಿಧಾನಸಭೆ ಸಚಿವಾಲಯದ ಪ್ರಕಟಣೆ ತಿಳಿಸಿದೆ.